ಗುಲ್ಬರ್ಗಾದಲ್ಲಿ ತಾಂಡಾ ಅಭಿವೃದ್ಧಿ ಯೋಜನೆ(ಕಮಲಾಪುರ)ಯ ಕಾರ್ಯಕ್ರಮಗಳ ಬಗ್ಗೆ

4630 (5168) : ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ತಾಂಡಾ ಅಭಿವೃದ್ಧಿ ಯೋಜನೆಯಡಿಯಲ್ಲಿ ಎಷ್ಟು ತಾಂಡಾಗಳನ್ನು ಆಯ್ಕೆಮಾಡಲಾಗಿದೆ:

ಆ) ಈ ತಾಂಡಾಗಳನ್ನು ಅಭಿವೃದ್ಧಿ ಪಡಿಸಲು ಹಾಕೊಳ್ಳಲಾಗಿರುವ ಕಾರ್ಯಕ್ರಮಗಳೇನು;

ಇ) ಎಷ್ಟು ತಾಂಡಾಗಳ ಅಭಿವೃದ್ಧಿ ಕೆಲಸ ಮುಗಿದಿದೆ. ಎಷ್ಟು ಬಾಕಿ ಇವೆ;

ಈ) ತಾಂಡಾಗಳ ಅಭಿವೃದ್ಧಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ:

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಇಂತಹ ಯೋಜನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಶಾದಿ ಮಹಲ್‌ಗಳು

4631 (5380) : ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 2001–02; 2002–03ರಲ್ಲಿ ಮತ್ತು 15.7.2003ರವರೆಗೆ ಮಂಜೂರಾಗಿರುವ ಶಾದಿ ಮಹಲ್‌ಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಇವುಗಳಿಗೆ ಈವರೆಗೆ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು)

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 2001–02, 2002–03ರಲ್ಲಿ ಮತ್ತು 15.7.2003ರವರೆಗೆ 64 ಶಾದಿಮಹಲ್‌ಗಳು ಮಂಜೂರಾಗಿರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇವುಗಳಿಗೆ ಇದುವರೆವಿಗೂ ರೂ. 221.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅನುಬಂಧ

ಕ್ರ.ಸಂ.	ಜಿಲ್ಲೆಯ ಹೆಸರು	ಒಟ್ಟು ಸಂಸ್ಥೆಗಳ ಸಂಖ್ಯೆ	ಬಿಡುಗಡೆಯಾದ ಮೊತ್ತ
1.	ಬೆಂಗಳೂರು ಗ್ರಾಮಾಂತರ	01	2.00
2.	ಬೆಂಗಳೂರು ನಗರ	02	10.00
3.	ಬಾಗಲಕೋಟೆ	05	19.00
4.	ಬೆಳಗಾಂ	08	23.00
5.	ಬಿಜಾಪುರ	06	18.00
6.	ಬಳ್ಳಾರಿ	01	5.00
7.	ಬೀದರ್	01	3.50